ವಿಜಯ ಕರ್ನಾಟಕ
Friday, July 8th, 2011

# ಸೂಡಾನ್ ಸಂವಿಧಾನ: ನಗರ ತಜ್ಞನ ಕೊಡುಗೆ

**ಐಎಎನ್‌ಎಸ್** ಹೊಸದಿಲ್ಲಿ



ಆಫ್ರಿಕಾದ ಹೊಸ ರಾಷ್ಟ್ರವಾಗಿ ದಕ್ಷಿಣ ಸೂಡಾನ್ ಜುಲೈ 9ರಂದು ಉದಯವಾಗಲಿದ್ದು, ಅದರ ಸಂವಿಧಾನದ ಕರಡು ರಚನೆ ಪ್ರಕ್ರಿಯೆಗೆ ಬೆಂಗಳೂರು ಮೂಲದ ವ್ಯಕ್ತಿಯೊಬ್ಬರು ಕೊಡುಗೆ ನೀಡಿದ್ದಾರೆ.

ದಕ್ಷಿಣ ಸೂಡಾನ್, ಭಾರತದ ಸಂವಿಧಾನ ಮತ್ತು ರಾಜಕೀಯ ಬೆಳವಣಿಗೆಗಳನ್ನು ವಿಶೇಷ ಆಸ್ಥೆಯಿಂದ ಗಮನಿಸುತ್ತಿದ್ದು, ದಕ್ಷಿಣ ಸೂಡಾನ್‌ನಂತಹ ರಾಷ್ಟ್ರಗಳ ಪಾಲಿಗೆ ಈ ಅನುಭವಗಳು ಅಮೂಲ್ಯವಾಗಿವೆ ಎಂದು ಆ ದೇಶದ ಸಂವಿಧಾನದ ಕರಡು ರಚನೆಗೆ ಸಹಕರಿಸುತ್ತಿರುವ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯದ ಕುಲಪತಿ ಸಂದೀಪ್ ಶಾಸ್ತ್ರಿ ಹೇಳಿದ್ದಾರೆ.

ಕೆನಡಾ ಮೂಲದ ಚಿಂತಕರ ಚಾವಡಿ 'ಫೋರಂ ಆಫ್ ಫೆಡರೇಷನ್' ನ ಅಂತರಾಷ್ಟ್ರೀಯ ಸಲಹೆಗಾರರಾದ ಶಾಸ್ತ್ರಿ ದಕ್ಷಿಣ ಸೂಡಾನ್‌ನಲ್ಲಿ ನಡೆಯುತ್ತಿರುವ ಸಾರ್ವಜನಿಕ ಚರ್ಚೆಗಳಲ್ಲಿ ಭಾಗವಹಿಸುತ್ತಿರುವ ಏಕೈಕ ಭಾರತೀಯ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ.